**ಕರ್ನಾಟಕ ಸರ್ಕಾರ**

ಸಂಖ್ಯೆ: ಡಿಟಿಇ 10 ಎಸಿಎ0 (2) 2013-14

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು - 560001,
ದಿನಾಂಕ:15-05-2013.

**-:::: ಸುತ್ತೋಲೆ ::::-**

**ವಿಷಯ:** 2013-14ನೇ ಸಾಲಿನಲ್ಲಿ ಖಾಸಗಿ ಅನುದಾನರಹಿತ ಪಾಲಿಟೆಕ್ನಿಕ್‌ಗಳಲ್ಲಿ ಡಿಪ್ಲೋಮಾ ಪ್ರವೇಶ - ಕೇಂದ್ರೀಕೃತ ಪ್ರವೇಶ ಘಟಕಗಳ ಮೂಲಕ ಅಭ್ಯರ್ಥಿಗಳ ಆಯ್ಕೆ ಮಾಡುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಆದೇಶ ಸಂ: ಇಡಿ 66 ಟಿಪಿಇ 2012, ದಿ:05-05-2012.
2. ಸರ್ಕಾರದ ಪತ್ರ ಸಂ. ಇಡಿ/92/ಟಿಪಿಇ/2011, ದಿ:11-04-2011.
3. ಸರ್ಕಾರದ ಆದೇಶ ಸಂ. ಇಡಿ 40 ಟಿಪಿಇ 2013, ದಿ:19-03-2013

**-0000000-**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರ ಸರ್ಕಾರಿ ಆದೇಶದ ಪ್ರಕಾರ ಸರ್ಕಾರಿ ಮತ್ತು ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ 2013-14ನೇ ಸಾಲಿನಿಂದ ಅನ್ವಯವಾಗುವಂತೆ ಪ್ರಥಮ ಡಿಪ್ಲೋಮಾ ಪ್ರವೇಶಕ್ಕೆ ಅಭ್ಯರ್ಥಿಗಳು ತಮ್ಮ ಇಚ್ಛೆಗೆ ಅನುಗುಣವಾಗಿ ಕೋರ್ಸು ಮತ್ತು ಪಾಲಿಟೆಕ್ನಿಕ್‌ನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶವನ್ನು ಕಲ್ಪಿಸಲಾಗಿದೆ. ಮುಂದುವರೆದಂತೆ, ಉಲ್ಲೇಖ(1)ರ ಸರ್ಕಾರದ ಆದೇಶದಲ್ಲಿ ಖಾಸಗಿ ಅನುದಾನರಹಿತ ಪಾಲಿಟೆಕ್ನಿಕ್ ಸಂಸ್ಥೆಗಳು ಸೀಟುಗಳನ್ನು ಸ್ವ-ಇಚ್ಛೆಯಿಂದ ಪ್ರವೇಶ ಪ್ರಕ್ರಿಯೆಗೆ ಮುನ್ನ ಸರ್ಕಾರಕ್ಕೆ ಬಿಟ್ಟುಕೊಟ್ಟಲ್ಲಿ ಅಂತಹ ಸೀಟುಗಳನ್ನು ಮೆರಿಟ್ ಆಧಾರದ ಮೇಲೆ ಪ್ರವೇಶಾತಿ ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ.

ಪ್ರಯುಕ್ತ, ಪ್ರವೇಶ ಬಯಸುವ ಖಾಸಗಿ ಅನುದಾನರಹಿತ ಪಾಲಿಟೆಕ್ನಿಕ್ ಸಂಸ್ಥೆಗಳು / ಆಡಳಿತ ಮಂಡಳಿಯವರು ಡಿಪ್ಲೋಮಾ ಪ್ರವೇಶ ಬಯಸುವ ಅಭ್ಯರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಪರಿಗಣಿಸಿ, **ಸೀಟುಗಳನ್ನು ಸ್ವ-ಇಚ್ಛೆಯಿಂದ ಸರ್ಕಾರಕ್ಕೆ ಬಿಟ್ಟು ಕೊಡುವ ನಿಟ್ಟಿನಲ್ಲಿ ಈ ಸುತ್ತೋಲೆಗೆ ಲಗತ್ತಿಸಿರುವ ಷರತ್ತುಗಳನ್ನು ಒಪ್ಪಿ ಅಥವಾ ಒಪ್ಪಂದ ವ್ಯವಸ್ಥೆಗೆ ಶಿಕ್ಷಣ ಸಂಸ್ಥೆ ಅಥವಾ ಸಂಘದವರು ತಮ್ಮ ಒಪ್ಪಿಗೆಯನ್ನು ನೀಡಲು ತಿಳಿಸಲಾಗಿದೆ.**

**ಈಗಾಗಲೇ ಉಲ್ಲೇಖ(3)ರ ಸರ್ಕಾರದ ಆದೇಶದಲ್ಲಿ 2013-14ನೇ ಸಾಲಿನ ಪ್ರಥಮ ಡಿಪ್ಲೋಮಾ ಪ್ರವೇಶ ಪ್ರಕ್ರಿಯೆಯ ಕಾರ್ಯಗಳು ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದಿಂದ ಪ್ರಾರಂಭವಾಗುತ್ತಿರುವುದರಿಂದ ಸಂಬಂಧಪಟ್ಟ ಪಾಲಿಟೆಕ್ನಿಕ್ ಸಂಸ್ಥೆಯವರು ತಮ್ಮ ಒಪ್ಪಿಗೆಯನ್ನು ದಿ:25-05-2013ರೊಳಗಾಗಿ ಜಂಟಿ ನಿರ್ದೇಶಕರು(ಆ), ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು - 560001 ಇವರಿಗೆ ಖುದ್ದಾಗಿ (ಮುದ್ದಾಂ) ಹಾಗೂ ನಿರ್ದೇಶನಾಲಯದ ಇ-ಮೇಲ್ dteacm@hotmail.com ಗೆ ಕೂಡಲೇ ಕಳುಹಿಸುವಂತೆ ತಿಳಿಸಲಾಗಿದೆ.**

**ವಿ.ಸೂ:- ನಿಗದಿತ ದಿನಾಂಕ:25-05-2013ರ ಸಂಜೆ 5.00ಗಂಟೆಗೆಯೊಳಗೆ ನಿರ್ದೇಶನಾಲಯಕ್ಕೆ ಮುದ್ದಾಂ ಮೂಲಕ ಕಳುಹಿಸಬೇಕು, ತದನಂತರ ಬಂದ ಒಪ್ಪಿಗೆ ಪತ್ರವನ್ನು ಪರಿಗಣಿಸಲಾಗುವುದಿಲ್ಲ.**

ನಿರ್ದೇಶಕರು
15/5/13

ಗೆ,

1. ಅಧ್ಯಕ್ಷರು, ಕರ್ನಾಟಕ ಪ್ರೈವೇಟ್ ಪಾಲಿಟೆಕ್ನಿಕ್‌ಗಳ ಅಸೋಸಿಯೇಷನ್(ರಿ), ಬೆಂಗಳೂರು.
2. ರಾಜ್ಯದ ಎಲ್ಲಾ ಅನುದಾನಿತ/ಖಾಸಗಿ ಅನುದಾನರಹಿತ ಪಾಲಿಟೆಕ್ನಿಕ್ ಪ್ರಿನ್ಸಿಪಾಲರುಗಳಿಗೆ.

File 10-13 (Pvt_DTE_Surrender)

<u>ಪ್ರತಿ:-</u>

1. ಕಾರ್ಯದರ್ಶಿಗಳು, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು.
2. ನಿರ್ದೇಶನಾಲಯದ ಎಲ್ಲಾ ಅಧಿಕಾರಿಗಳಿಗೆ,
3. ಸಾರ್ವಜನಿಕ ಸಂಪರ್ಕಾಧಿಕಾರಿಗಳು, ತಾಂ.ಶಿ.ನಿ, ಬೆಂಗಳೂರು.
4. ನಿರ್ದೇಶಕರ ಆಪ್ತಶಾಖೆಗೆ.
5. ಸಂಯೋಜನಾಧಿಕಾರಿಗಳು, ತಾಂ.ಶಿ.ನಿ, (ಈ ಸುತ್ತೋಲೆಯನ್ನು ನಿರ್ದೇಶನಾಲಯದ ಅಂತರ್ ಜಾಲದಲ್ಲಿ (ವೆಬ್‌ಸೈಟ್) ಪ್ರಚುರಪಡಿಸುವುದು).
6. ಕಛೇರಿ ಪ್ರತಿ.

## 2013–14ನೇ ಶೈಕ್ಷಣಿಕ ಸಾಲಿನಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು ಮೂಲಕ ಪ್ರಥಮ ಡಿಪ್ಲೋಮಾ ಪ್ರವೇಶ ಬಯಸುವ ಅಭ್ಯರ್ಥಿಗಳ ಆಯ್ಕೆ ಬಗ್ಗೆ

## ಸಮ್ಮತಾಭಿಪ್ರಾಯ ವ್ಯವಸ್ಥೆ ಅಥವಾ ಒಪ್ಪಂದಕ್ಕೆ ಒಪ್ಪಿಗೆ ಪತ್ರ

## (ಖಾಸಗಿ ಅನುದಾನರಹಿತ ಪಾಲಿಟೆಕ್ನಿಕ್ ಸಂಘ/ಸಂಸ್ಥೆಗಳಿಗೆ)

2013–14ನೇ ಸಾಲಿನಿಂದ ಪ್ರಥಮ ಡಿಪ್ಲೋಮಾ ಪ್ರವೇಶಕ್ಕೆ ಸಂಬಂಧಿಸಿದಂತೆ, ಸರ್ಕಾರಿ ಹಾಗೂ ಅನುದಾನಿತ ಪಾಲಿಟಕ್ನಿಕ್‌ಗಳ ಪ್ರವೇಶ ಪ್ರಕ್ರಿಯೆ ನಡೆಯುವ ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ಮುಖಾಂತರ ತುಂಬುವಲ್ಲಿ ಕರ್ನಾಟಕ ನಿವಾಸಿ ವಿದ್ಯಾರ್ಥಿಗಳ ಮತ್ತು ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದ ವರ್ಗಗಳ ಹಿತರಕ್ಷಣೆಗಾಗಿ ಸರ್ಕಾರ ನಿಗಧಿಪಡಿಸಿದ ಶುಲ್ಕ ಹಾಗೂ ಮೀಸಲಾತಿ ಪ್ರಕಾರ ಸೀಟು ಹಂಚಿಕೆಯ ಬಗ್ಗೆ ಸಮ್ಮತಾಭಿಪ್ರಾಯ ವ್ಯವಸ್ಥೆ ಅಥವಾ ಒಪ್ಪಂದಕ್ಕೆ ಸಮ್ಮತಿ ಸೂಚಿಸಲು ನನಗೆ / ನಮಗೆ / ಆಡಳಿತ ಮಂಡಳಿ ಅಧಿಕಾರವನ್ನು ನೀಡಿದೆ. ಅದರಂತೆ, ನಮ್ಮ ಪಾಲಿಟೆಕ್ನಿಕ್‌ಗಳ ಈ ಕೆಳಕಂಡ ಕೋರ್ಸುಗಳ ಪ್ರವೇಶವನ್ನು ನಿಗಧಿತ ನೋಡಲ್ ಸೆಂಟರ್‌ಗಳ ಮುಖಾಂತರ ತುಂಬಲು ಸರ್ಕಾರದ ಮೀಸಲಾತಿ ನಿಯಮಗಳು ಹಾಗೂ ಸರ್ಕಾರ ನಿಗಧಿಪಡಿಸಿದ ಶುಲ್ಕಕ್ಕೆ ಪೂರ್ಣವಾಗಿ ಒಪ್ಪಿರುತ್ತೇನೆ/ವೆ.

| ಕ್ರ.ಸಂ. | ಕೋರ್ಸು | ಒಟ್ಟು ಇಂಟೇಕ್ | ನೋಡಲ್ ಸೆಂಟರ್ ಮುಖಾಂತರ ತುಂಬುವ ಸೀಟುಗಳ ಸಂಖ್ಯೆ |
|---|---|---|---|
| | | | |
| | | | |
| | | | |
| | | | |
| | | | |

**ಶುಲ್ಕ ನಿಗಧಿ ಬಗ್ಗೆ:**

ಸರ್ಕಾರದ ಆದೇಶ ಸಂ.ಇಡಿ/119/ಟಿಪಿಇ/2005, ದಿ:18–10–2005ರಂತೆ ಕೆಳಕಂಡಂತೆ ಶುಲ್ಕವನ್ನು ಪಡೆಯಲು ಒಪ್ಪಿರುತ್ತೇನೆ/ವೆ.

| ಖಾಸಗಿ ಪಾಲಿಟೆಕ್ನಿಕ್‌ಗೆ ಅನ್ವಯವಾಗುವಂತೆ | ಬೋಧನಾ ಶುಲ್ಕ | ಇತರೇ ಶುಲ್ಕ | ಅಭಿವೃದ್ಧಿ ಶುಲ್ಕ | ಒಟ್ಟು |
|---|---|---|---|---|
| ಅ)ಕರ್ನಾಟಕದ ಅಭ್ಯರ್ಥಿಗಳಿಗೆ – | ₹ 9,450/- | ₹ 800/- | ₹ 500/- | ₹ 10,750/- |

ಸರ್ಕಾರದ ನೀತಿ ನಿಯಮಗಳನ್ವಯ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ / ಪ್ರವರ್ಗ–1 / ವಾರ್ಷಿಕ ಆದಾಯ ₹ 44,500/-ಕ್ಕಿಂತ ಕಡಿಮೆ ಇರುವ ವಿದ್ಯಾರ್ಥಿಗಳಿಗೆ ಬೋಧನಾ ಶುಲ್ಕವನ್ನು ಪ್ರವೇಶ ಸಮಯದಲ್ಲಿ ಪಡೆಯಲಾಗುವುದಿಲ್ಲ. ಹಾಗೂ ನಿಯಮಾನುಸಾರ ಸಂಬಂಧಪಟ್ಟ ಪ್ರಾಧಿಕಾರದವತಿಯಿಂದ ಸದರಿ ವಿದ್ಯಾರ್ಥಿಗಳ ಶುಲ್ಕವನ್ನು ಮರುಪಾವತಿ ಮಾಡಿಕೊಳ್ಳಲು ಒಪ್ಪಿರುತ್ತೇನೆ/ವೆ.

ಸಹಿ..........................................
ಹೆಸರು....................................
ಪದನಾಮ...................................
ಪಾಲಿಟೆಕ್ನಿಕ್ ಶಿಕ್ಷಣ ಸಂಸ್ಥೆಯ / ಸಂಘದ ಹೆಸರು(ಮೊಹರಿನೊಂದಿಗೆ)

ಸ್ಥಳ:
ದಿನಾಂಕ: